# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 240 |
| 2) | ಸದಸ್ಯರ ಹೆಸರು | ಶ್ರೀ ರಾಜೇಂದ್ರ ರಾಜಣ್ಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ | 10.12.2024 |
| 4) | ಉತ್ತರಿಸುವವರು | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು . |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು-ರಾಯದುರ್ಗ ರೈಲ್ವೆ ಕಾಮಗಾರಿಯ ಒಟ್ಟು ಯೋಜನಾ ವೆಚ್ಚ ಎಷ್ಟು; ಪ್ರಸ್ತುತ ಕಾಮಗಾರಿಯು ಯಾವ ಹಂತದಲ್ಲಿದೆ; (ಸಂಪೂರ್ಣ ವಿವರ ನೀಡುವುದು) | ತುಮಕೂರು- ರಾಯದುರ್ಗ ನೂತನ ರೈಲು ಮಾರ್ಗ ಯೋಜನೆಯ ಅಂದಾಜು ವೆಚ್ಚ ರೂ.2495.00 ಕೋಟಿಗಳಾಗಿರುತ್ತದೆ.<br><br>ರೈಲ್ವೆ ಇಲಾಖೆಯಿಂದ ಪಡೆದ ಮಾಹಿತಿ ಅನುಸಾರ ಕಾಮಗಾರಿಯ ಪ್ರಸ್ತುತ ಹಂತದ ಮಾಹಿತಿಯನ್ನು ಈ ಕೆಳಕಂಡಂತೆ ನೀಡಿದೆ:-<br><br>• ರಾಯದುರ್ಗ-ದೊಡ್ಡಹಳ್ಳಿ (83 ಕಿ.ಮೀ)- 2016-17ರಲ್ಲಿ ಪೂರ್ಣಗೊಳಿಸಲಾಗಿದೆ. (ಆಂಧ್ರ ಪ್ರದೇಶದ 75 ಕಿಮೀ & ಕರ್ನಾಟಕದ 8 ಕಿಮೀ)<br>• ದೊಡ್ಡಹಳ್ಳಿ-ಪಾವಗಡ (18 ಕಿಮೀ) – ಕಾಮಗಾರಿ ಪ್ರಗತಿಯಲ್ಲಿದೆ.<br>• ಪಾವಗಡ-ಊರುಕೆರೆ (95 ಕಿಮೀ)- ಅಗತ್ಯವಿದ್ದ 1004.12 ಎಕರೆಗಳಲ್ಲಿ 924.72ಎಕರೆ ಹಸ್ತಾಂತರವಾಗಿದ್ದು, ಬಾಕಿ 79.4 ಎಕರೆ ಜಮೀನನ್ನು ಹಸ್ತಾಂತರಿಸಿದ ನಂತರ ಟೆಂಡರ್ ಕರೆಯಲು ಉದ್ದೇಶಿಸಲಾಗಿದೆ.<br>• ಊರುಕೆರೆ–ತುಮಕೂರು (11 ಕಿ.ಮೀ) - ಕಾಮಗಾರಿ ಪ್ರಗತಿಯಲ್ಲಿದೆ. |
| ಆ) | ಈ ರೈಲ್ವೆ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? | ಈ ಯೋಜನೆಯನ್ನು ಫೆಬ್ರವರಿ–2028ರ ಒಳಗಾಗಿ ಪೂರ್ಣಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ರೈಲ್ವೆ ಇಲಾಖೆಯು ತಿಳಿಸಿರುತ್ತದೆ. |

ಸಂಖ್ಯೆ: ಮೂಅಇ 281 ರಾರಾಹೆ 2024/ಇ

**(ಎಂ.ಬಿ.ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು